೫) ಪ್ರತೀ ಉಪ ನೋಂದಣಾಧಿಕಾರಿಗಳ ಕಛೇರಿಗಳಲ್ಲಿ ಸಿಬ್ಬಂದಿಯವರು ಕಾರ್ಯಾಲಯಕ್ಕೆ ಬಂದಾಕ್ಷಣ ತಮ್ಮ ಬಳಿಯಿರುವ ಹಣದ ಬಗ್ಗೆ ನಮೂದಿಸಲ್ಪಟ್ಟ ಪಹಿಯಂಲ್ಲಿ ಘೋಷಣೆ ಮಾಡುವುದನ್ನು ಕಡ್ಡಾಯಗೊಳಿಸಿದೆ.

ವಿದ್ಯುಚ್ಛಕ್ತಿ ಕನಿಷ್ಠ ಶೇವಣಿ ಮಂತ್ತು ಮಾಸಿಕ ಬಿಲ್ಲು ಬಗ್ಗೆ

೧೮೨೭ ಶ್ರೀ ಕೆ. ವಸಂತ ಬಂಗೇರ.—ಮಾನ್ಯ ವಿದ್ಯುತ್ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿದ್ಯುತ್ ಬಳಕೆದಾರರಿಗೆ ಪ್ರತಿ ತಿಂಗಳಂ ಮಾಸಿಕ ಕನಿಷ್ಠ ಮತ್ತು ಬಳಕೆಯಾದ ವಿದ್ಯುತ್ತಿನ ಮೊತ್ತ ಹೀಗೆ ಎರಡು ರೀತಿಯಾದ ದರಗಳನ್ನು ಸೇರಿಸಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಬಳಕೆಯಾದ ವಿದ್ಯುತ್ತಿನ ಮೊತ್ತದಲ್ಲಿ ಸರಿಯಾದ ಮೀಟರುಗಳನ್ನು ಅಳವಡಿಸಿದ ಕಾರಣ ಭಾರಿ ವಂಚನೆ ನಡೆಯುತ್ತಿರುವುದು ನಿಜವೆ?

ಇ) ಮೀಟರು ಓದುವವರು ಬಳಕೆದಾರರೊಂದಿಗೆ ಶಾಮೀಲಾಗಿ ಮಂಡಳಿಗೆ ನಷ್ಟ ಉಂಟು ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜೆ. ಎಸ್. ದೇಶಮುಖ್(ವಿದ್ಯುತ್ ಗಣಿ, ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಹೌದು. ಮಂಡಳಿಯಂ ಎರಡು ಭಾಗದ ದರಗಳನ್ನು ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದರಲ್ಲಿ ಒಂದು ನಿಗದಿತ ದರ ಮತ್ತೊಂದು ಬಳಕೆಗೆ ಅನ್ವಯಿಸಿದ ದರ (ಈ 'ನಿಗದಿತ' ದರ ಅಂದರೆ ಫಿಕ್ಸ್ಡ್ ಚಾರ್ಜ್ ಮಾಸಿಕ ಕನಿಷ್ಠ ಅಂದರೆ ಮಾಸಿಕ ಮಿನಿಮಂ).

ಆ) ವಂಚನೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಅಂತಹ ಪ್ರಕರಣಗಳು ಮಂಡಳಿ ಗಮನಕ್ಕೆ ಬಂದಲ್ಲಿ ಕೂಡಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಇ) ಮೀಟರು ಓದುವವರು ಬಳಕೆದಾರರೊಂದಿಗೆ ಶಾಮೀಲಾಗಿ ಮಂಡಳಿಗೆ ನಷ್ಟ ಉಂಟು ಮಾಡುತ್ತಿರುವ ಪ್ರಸಂಗಳು ಮಂಡಳಿಯ ಗಮನಕ್ಕೆ ಬಂದಿಲ್ಲ. ಹಾಗೆ ಬಂದಲ್ಲಿ ಅಂತಹವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಸರ್ವೋದಯ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಸಿದ್ದಾಪುರನವರು ಎತ್ತು ಖರೀದಿಗಾಗಿ ನೀಡಲಾದ ಸಾಲದ ಬಗ್ಗೆ.

೧೮೮೭ ಶ್ರೀ ಗೋಪಾಲ ಮುಕುಂದ ಕಾನಡೆ.(ಸಿರಸಿ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲಾ ಸಿದ್ದಾಪುರ ಸರ್ವೋದಯ ಜಮೀನು ಅಭಿವೃದ್ಧಿ ಬ್ಯಾಂಕ್‌ನಲ್ಲಿ ರೈತರು ಎತ್ತು ಖರೀದಿಗೆ ಪಡೆದ ಸಾಲದಲ್ಲಿ ಜೀಪವಿಮೆ ಹಣವನ್ನು ಕಂಪನಿಗೆ ತುಂಬದೇ ರೈತರಿಗೆ ವಂಚನೆ ಮಾಡಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಏನು ಕ್ರಮ ಕೈಗೊಳ್ಳುವರು ?

ಶ್ರೀ ಆರ್. ಎಲ್. ಜಾಲಪ್ಪ(ಸಹಕಾರ ಮಂತ್ರಿಗಳು).—

ಅ) ಸಿದ್ಧಾಪುರ ಸರ್ವೋದಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಎತ್ತು ಖರೀದಿಗೆ ಸಾಲ ನೀಡಿದ ಳಿಳ ಫಲಾನುಭವಿಗಳಲ್ಲಿ ಒಂದೇ ಒಂದು ಪ್ರಕರಣದಲ್ಲಿ ಮಾತ್ರ ವಿಮೆ ಹಣ ವನ್ನು ಪಾವತಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದು ಕಣ್ಣು ತಪ್ಪಿನಿಂದ ಆದ ಪ್ರಮಾಣವಾಗಿರುತ್ತದೆ.